# ಪ್ರೇಮವೆನಲು ಹಾಸ್ಯವೆ?



ಕನ್ನಡ ಕಾವ್ಯದಲ್ಲಿ ಪ್ರೇಮಕವನಗಳು ಅಸಂಖ್ಯ ಸಂಖ್ಯೆಯಲ್ಲಿವೆ. ಕನ್ನಡದ ಕವಿಗಳು ಗಂಡು ಹೆಣ್ಣಿನ ಸಂಬಂಧ, ಆಕರ್ಷಣೆಯ ಬಗ್ಗೆ ಮುಕ್ತವಾಗಿ, ಚಿತ್ರವತ್ತಾಗಿ, ಒಳಗಿನ ಕಣಕಣಕ್ಕೂ ಆ ಅನುಭವ ತಾಕುವಂತೆ ಬರೆದಿದ್ದಾರೆ. ಅವರ ಗಂಭೀರ, ಮಹತ್ವದ ಕವಿತೆಗಳ ಜೊತೆಗೇ ಅವರ ಪ್ರೇಮ–ಕಾಮದ ಕವಿತೆಗಳೂ ರಸಿಕರನ್ನು ಸೆಳೆದಿವೆ, ಮುದಗೊಳಿಸಿವೆ. ಕನ್ನಡದ ಈಚಿನ ಕವಿಗಳಲ್ಲಿ ಪ್ರೇಮ–ಕಾಮವನ್ನು ಅಭಿವ್ಯಕ್ತಿಸುವ, ಓದಬಲ್ಲ, ಓದಿದಾಗ ಚಕಿತಗೊಳಿಸುವ ಅಪ್ಪಟ ಕವಿತೆಗಳೇ ಕಾಣೆಯಾಗಿವೆ ಎನ್ನವ ದೂರು ವಾಚಕರದು. ಈ ಹಿನ್ನೆಲೆಯಲ್ಲಿ ಪ್ರೇಮ–ಕಾಮದ ಕವಿತೆಗಳು ಯಾಕೆ ಕಡಿಮೆಯಾಗುತ್ತಿವೆ, ಅವುಗಳ ರಚನೆಯ ಕುರಿತಂತೆ ಕವಿಗಳ ನಿಲುವು ಏನು ಎಂಬುದನ್ನು ಇಲ್ಲಿ ಕೊಡಲಾಗಿದೆ.